**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಗಳವರ ನ್ಯಾಯಾಲಯ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**

# ಓ ಎಸ್ ನಂ. 182/2020

ಪಿ ಡಬ್ಲ್ಯೂ: 4

ಸಾಕ್ಷಿಯ ಹೆಸರು : ವಿಂದ್ಯಾ ಎನ್ ಎಂ
ಗಂಡನ ಹೆಸರು : ಅಮೀತ್ ಕುಮಾರ್
ವಯಸ್ಸು : 40 ವರ್ಷ
ಉದ್ಯೋಗ : ಹಿರಿಯ ಭೂ ವಿಜ್ಞಾನಿ
ವಾಸ : ಶಿವಮೊಗ್ಗ

ದಿನಾಂಕ 04-02-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆ: ವಾದಿ ಪರ: ಶ್ರೀ ಎಂ ಎಂ ವಕೀಲರಿಂದ:

ನಾನು ಡಿಸೆಂಬರ್ 2019 ರಿಂದ ಏಪ್ರಿಲ್ 2022 ರವರೆಗೆ ಚಿಕ್ಕಮಗಳೂರಿನ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಹಿರಿಯ ಭೂ ವಿಜ್ಞಾನಿಯಾಗಿ ಕೆಲಸ ಮಾಡಿರುತ್ತೇನೆ. ನಮ್ಮ ಇಲಾಖೆಯಿಂದ ಹುಲಿಕೆರೆ ಗ್ರಾಮದ ಸರ್ವೆ ನಂ.13/5 ಮತ್ತು 25/1 ರಲ್ಲಿ ಒಟ್ಟು 4 ಎಕರೆ 30 ಗುಂಟೆ ಪ್ರದೇಶಕ್ಕೆ ಶ್ರೀ ಶಿವಕುಮಾರ್ ಇವರಿಗೆ ಗಣಿ ಗುತ್ತಿಗೆ ಮಂಜೂರಾತಿ ಮಾಡಿರುತ್ತೇವೆ. ಗುತ್ತಿಗೆ ಸಂಖ್ಯೆ 549 ಆಗಿರುತ್ತದೆ. ನಮ್ಮ ಇಲಾಖೆಯಿಂದ ವಾದಿಯ ಜಮೀನಿನಲ್ಲಿ ಒತ್ತುವರಿಯಾಗಿರುವ ಬಗ್ಗೆ ವರದಿ ನೀಡಿರುವುದಿಲ್ಲ. ಜಂಟಿ ಸರ್ವೆ ಮಾಡಿ ನಮ್ಮ ಇಲಾಖೆಯಿಂದ ಒಂದೂವರೆ ಗುಂಟೆ ಜಮೀನು ವಾದಿಯ ಜಮೀನಿನಲ್ಲಿ ಒತ್ತುವರಿಯಾಗಿದೆ ಎಂದು ನಮ್ಮ ಇಲಾಖೆಯಿಂದ ವರದಿ ನೀಡಿರುವುದಿಲ್ಲ.

ಜಂಟಿ ಸರ್ವೆ ಮಾಡಲು ಒಂದು ದಿನಾಂಕವನ್ನು ನಿಗದಿ ಪಡಿಸಿ ಆ ದಿನ ಭೂಮಾಪನ ಇಲಾಖೆಯಿಂದ, ಗಣಿ ಇಲಾಖೆ ಮತ್ತು ನಮ್ಮ ಇಲಾಖೆಯವರು, ಗುತ್ತಿಗೆದಾರರು, ಪಕ್ಕದ ಜಮೀನಿನವರು ಮತ್ತು ಪಕ್ಷಗಾರರ ಸಮಕ್ಷಮದಲ್ಲಿ ಜಂಟಿ ಸರ್ವೆ ಮಾಡಿರುತ್ತೇವೆ. ಆ ದಿನ ಅವರವರಿಗೆ ಬಾಂದನ್ನು ತೋರಿಸಿ ಮಹಜರನ್ನು ತಯಾರಿಸಿ, ಪಕ್ಷಗಾರರ ಸಹಿಯನ್ನು ಪಡೆದಿರುತ್ತೇವೆ, ಅದರಲ್ಲಿ ನನ್ನ ಸಹಿ ಸಹ ಇರುತ್ತದೆ.

<u>ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಎನ್ ಎಸ್ ವಕೀಲರಿಂದಃ</u>

ಜಂಟಿ ಸರ್ವೆ ಮಾಡಿದ ಕಾಲಕ್ಕೆ ಪ್ರತಿವಾದಿಯವರು ವಾದಿಯ ಜಮೀನನ್ನು ಒತ್ತುವರಿ ಮಾಡಿರುವ ಬಗ್ಗೆ ಕಂಡು ಬಂದಿರುವುದಿಲ್ಲ. ಅದರ ಬಾಬ್ತು ನಮ್ಮ ಇಲಾಖೆಯಿಂದ ಯಾವುದೇ ವರದಿ ನೀಡಿರುವುದಿಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.